**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ , ಉಡುಪಿ</u>**

ಸ್ಪೆಷಲ್ ಕೇಸ್ ನಂಃ 56/2023 ಪಿ.ಡಬ್ಲ್ಯೂಃ 5

ಸಿ.ಡಬ್ಲ್ಯೂಃ 6

| | |
|---|---|
| ಸಾಕ್ಷಿದಾರರ ಹೆಸರು | ಗುಲಾಬಿ |
| ಗಂಡನ ಹೆಸರು | ಶಿವಶಂಕರ್ |
| ವಯಸ್ಸು | 51 ವರ್ಷ |
| ಉದ್ಯೋಗ | ಖಾಸಗಿ |
| ವಿಳಾಸ | ಕೆಮ್ಮಣ್ಣು, ಉಡುಪಿ |

ದಿನಾಂಕಃ 01-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ಚಾಸಾ 1 ನನ್ನ ತಮ್ಮ. ಚಾಸಾ 1 ರಿಂದ ಚಾಸಾ 5 ಮತ್ತು ಚಾಸಾ 7 ರಿಂದ ಚಾಸಾ 10 ಗೊತ್ತು. ಚಾಸಾ 1 ಮತ್ತು ನಾವು ಅಕ್ಕ ಪಕ್ಕದ ಮನೆಗಳಲ್ಲಿ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ಚಾಸಾ 1 ಇವರಿಗೆ ಮದುವೆಯಾಗಿದ್ದು, ಏಳು ವರ್ಷಗಳ ಹಿಂದೆ ಆತನ ಹೆಂಡತಿ ಆತನನ್ನು ಬಿಟ್ಟು ಹೋಗಿರುತ್ತಾಳೆ. ಚಾಸಾ 1 ರವರು ಪೈಂಟಿಂಗ್ ಕೆಲಸ ಮಾಡುತ್ತಾರೆ. ಮೂರು ವರ್ಷಗಳ ಹಿಂದೆ, ಚಾಸಾ 1 ರವರು ಕೆಮ್ಮಣ್ಣು ಬಳಿಯ ಹಂಪನಕಟ್ಟದಿಂದ ಸಂಜೆ ಸುಮಾರು 07.00 ಗಂಟೆಯ ಸಮಯದಲ್ಲಿ ನನಗೆ ಫೋನ್ ಮಾಡಿ, ಕೆಲ ಜನರು ಅವರಿಗೆ ಹಲ್ಲೆ ಮಾಡಿದರು ಎಂದು ಹೇಳಿದರು. ನಾನು ಹಾಗೂ ನನ್ನ ಗಂಡ ಕೂಡಲೇ ಕೆಮ್ಮಣ್ಣುವಿನ ಚರ್ಚ್ ಬಳಿಯಿರುವ ಬಾಯಮ್ಮ ಇವರ ಮನೆಯಲ್ಲಿ ಚಾಸಾ 1 ಇದ್ದ. ಆತನನ್ನು ವಿಚಾರಿಸಿದಾಗ, ಚಾಸಾ 1 ಈತನನ್ನು ತೊಟ್ಟಂ ಬೀಚು, ಸನ್ಯಾಸಿ ಮಠದ ಬಳಿಯ ಅಂಗಡಿ ಮತ್ತು ಹಂಪನಕಟ್ಟದಲ್ಲಿ ಅವರಿಗೆ ಐದಾರು ಜನರಿಂದ ಹಲ್ಲೆಯಾಗಿರುವುದಾಗಿ ಹೇಳಿದರು.

2) ಕೂಡಲೇ ನಾನು ಹಾಗೂ ನನ್ನ ಗಂಡ ಚಾಸಾ 1 ರವರನ್ನು ಅಜ್ಜರಕಾಡು ಆಸ್ಪತ್ರೆಗೆ ಕರೆತಂದೇವು. ಅಲ್ಲಿ ಆತನನ್ನು ಒಳರೋಗಿಯಾಗಿ ದಾಖಲು ಮಾಡಿದರು.

ಅಲ್ಲಿಗೆ ಪೊಲೀಸರು ಬಂದರು. ಅವರಿಗೆ ಚಾಸಾ 1 ರವರು ಹಲ್ಲೆಯಾದ ಬಗ್ಗೆ ಹೇಳಿದ್ದು, ಅದನ್ನು ನನ್ನ ಅಕ್ಕನ ಮಗಳು ಉಷಾ ದೂರನ್ನು ಬರೆದಿದ್ದರು. ಅದನ್ನು ಪೊಲೀಸರು ಪಡೆದಿದ್ದರು. ಚಾಸಾ 1 ಈತನಿಗೆ ಹಲ್ಲೆ ಮಾಡಿದವರಲ್ಲಿ ನನಗೆ 1 ನೇ ಆರೋಪಿ ಮಾತ್ರವೇ ಈ ಮೊದಲು ಕೇಳಿ ಗೊತ್ತು. ನಾನು 1 ನೇ ಆರೋಪಿಯನ್ನು ಈ ಮೊದಲು ನೋಡಿರಲಿಲ್ಲ. ಘಟನೆಯಾದ ಮಾರನೇ ದಿನ ಆತನನ್ನು ಠಾಣೆಲ್ಲಿ ನೋಡಿರುತ್ತೇನೆ.

**ಆರೋಪಿತರ ಪರವಾಗಿ ಪಾಟೀಸವಾಲು: ಶ್ರೀ ಎಸ್.ಎ. ವಕೀಲರಿಂದ**

ವೇಳೆ ಕೋರಿದ್ದರಿಂದ ಖರ್ಚು ಸಮೇತ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.